## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ

**ಸಿ.ಸಿ.ನಂ.588/2023**

ಫಿರ್ಯಾದಿದಾರರುಃ ಗಬ್ಬೂರು ಪೋಲಿಸ ಠಾಣೆ

**ವಿರುದ್ಧ**

ಆರೋಪಿತರುಃ

1. ಸಣ್ಣ ಶಾಲಮ್ ತಂದೆ ಖಾಜಾ ನಾಯಕ,
ವಯಸ್ಸುಃ 43 ವರ್ಷ, ಉದ್ಯೋಗಃ ಒಕ್ಕಲುತನ,

2. ಶಮಶುದ್ದೀನ್ ತಂದೆ ಖಾಜಾ ನಾಯಕ,
ವಯಸ್ಸುಃ 38 ವರ್ಷ, ಉದ್ಯೋಗಃ ಒಕ್ಕಲುತನ,

3. ಶಾಹೀದ್ ತಂದೆ ದೊಡ್ಡ ಶಾಲಮ್ ನಾಯಕ,
ವಯಸ್ಸುಃ 20 ವರ್ಷ, ಉದ್ಯೋಗಃ ವಿದ್ಯಾರ್ಥಿ,
ಎಲ್ಲರೂ ಸಾಃ ಹನುಮಾಪೂರ, ತಾಃದೇವದುರ್ಗ.

4. ಅಕ್ಬರ್ ತಂದೆ ಖಾಜಾ ಹುಸೇನ್,
ವಯಸ್ಸುಃ 38 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಹೀರೆರಾಯಕುಂಪಿ, ತಾಃದೇವದುರ್ಗ.

**<u>ದೋಷಾರೋಪಣೆ</u>**

ನಾನು ಹೆ.ಚ್.ಎ.ಸಾತ್ವಿಕ್, ದೇವದುರ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೋರಿಸುವುದೇನೆಂದರೆ,

ದಿನಾಂಕಃ 24.04.2022 ರಂದು ಮಃ12.30 ಗಂಟೆಯ ಸಮಯದಲ್ಲಿ ಗಬ್ಬೂರು ಪೊಲೀಸ ಠಾಣಾ ವ್ಯಾಪ್ತಿಯಲ್ಲಿರುವ ಹಿರೆರಾಯಕುಂಪಿ ಗ್ರಾಮದಲ್ಲಿ 1 ನೇ ಆರೋಪಿಯಾದ ನೀವು ಸಾಕ್ಷಿ-4 ರವರಿಗೆ ಕಾಲಿನಿಂದ ಒದ್ದು ಕೈಯಿಂದ ಹೊಡೆದಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 323 ಸಹ ವಾಚಕ ಕಲಂ 34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

2. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ 2 ನೇ ಆರೋಪಿಯಾದ ನೀವು ಸಾಕ್ಷಿ-4 ರವರಿಗೆ ಬಡಿಗೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 324 ಸಹ ವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

3. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ 3 ನೇ ಆರೋಪಿಯಾದ ನೀವು ಸಾಕ್ಷಿ-5 ರವರಿಗೆ ಬಡಿಗೆಯಿಂದ ಬಲಗೈಗೆ ಹೊಡೆದು ಗಾಯ ಮಾಡಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 324 ಸಹ ವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

4. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ 1ನೇ ಆರೋಪಿಯಾದ ನೀವು ಸಾಕ್ಷಿ-12 ರವರಿಗೆ ಬಡಿಗೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 324 ಸಹ ವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

5. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ 2ನೇ ಆರೋಪಿಯಾದ ನೀವು ಸಾಕ್ಷಿ-11 ರವರಿಗೆ ಬಡಿಗೆಯಿಂದ ಕಾಲಿಗೆ ಹೊಡೆದು ಗಾಯ ಮಾಡಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 324 ಸಹ ವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

6. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ 1ನೇ ಆರೋಪಿಯಾದ ನೀವು ಸಾಕ್ಷಿ-4 ರವರಿಗೆ ಎಲೆ ಸೂಳೆ ನೀನು ನಿನ್ನ ತವರು ಮನೆಯಲ್ಲಿ ಇದ್ದಿ ನನ್ನ ಊರಿಗೆ ಬರುವುದಿಲ್ಲ ಎಂದು ಈಗ ಪಾಲು ಕೇಳಲು ಬರುತ್ತಿಯಾ ಸೂಳೆ ಎಂದು ಅವಾಚ್ಯವಾಗಿ ಬೈದಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ.504 ಸಹ ವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

7. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ 4 ನೇ ಆರೋಪಿತರಾದ ನೀವು ಈ ಹೊಲ ನಾನು ಲೀಜಿಗೆ ಮಾಡುತ್ತೇನೆ ಯಾವ ಸೂಳೆ ಮಗ ಹೊಲದ ತಂಟೆಗೆ ಬರುತ್ತಾನೆ ನಾನು ನೋಡುತ್ತೇನೆ ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಸುಟ್ಟು ಬಿಡುತ್ತೇನೆ ಎಂದು ಜೀವದ ಬೇದರಿಕೆ ಹಾಕಿರುವಿರೆಂದ್ದು ಭಾ.ದಂ.ಸಂ. ಕಲಂ.506 ಸಹ ವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

ಪ್ರಶ್ನೆಃ1 ಈ ಮೇಲೆ ಓದಿ ಹೇಳಿದ ದೋಷಾರೋಣೆಗಳು ನಿಮಗೆ ಅರ್ಥವಾಯಿತೇ ?
1ನೇ ಆರೋಪಿ ಉತ್ತರಃ
2ನೇ ಆರೋಪಿ ಉತ್ತರಃ
3ನೇ ಆರೋಪಿ ಉತ್ತರಃ
4ನೇ ಆರೋಪಿ ಉತ್ತರಃ

ಪ್ರಶ್ನೆಃ2 ಸದರಿ ದೋಷಾರೋಪಣೆಗಳನ್ನು ನೀವು ಒಪ್ಪಿಕೊಳ್ಳುವಿರಾ ?
1ನೇ ಆರೋಪಿ ಉತ್ತರಃ
2ನೇ ಆರೋಪಿ ಉತ್ತರಃ
3ನೇ ಆರೋಪಿ ಉತ್ತರಃ
4ನೇ ಆರೋಪಿ ಉತ್ತರಃ

ಪ್ರಶ್ನೆಃ3 ಸದರಿದೋಷಾರೋಪಣೆಗಳ ಬಗ್ಗೆ ನಿಮ್ಮ ವಿಚಾರಣೆ ಆಗಬೇಕೆ ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

(ಸದರಿ ಆರೋಪಣೆಗಳನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಆರೋಪಿತರು ನೀಡಿದ ಉತ್ತರ/ಉತ್ತರಗಳನ್ನು ಸರಿಯಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢಿಕರಿಸಲಾಗಿದೆ.)

ದಿನಾಂಕಃ 11.09.2023 ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸ್ಥಳಃ ದೇವದುರ್ಗ ದೇವದುರ್ಗ.